॥ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀನರಸಿಂಹಾಯನಮಃ ॥

ಶ್ರೀಬ್ರಹ್ಮಣ್ಯತೀರ್ಥಗುರುಭ್ಯೋನಮಃ

ರಾಗ : ನವರೋಜು ತಾಳ : ಆದಿ

ನಿನ್ನ ನಂಬಿದೆನೋ ಬ್ರಹ್ಮಣ್ಯತೀರ್ಥಾರ್ಯಾ
ಸನ್ನುತಚರಣಪಾವನ ಸುಚರ್ಯಾ ॥ ಪ ॥
ಘನ್ನಭವದ ಭಯವನ್ನು ಕಳೆದು ಯತಿ
ರನ್ನ ಎನ್ನನು ಧನ್ಯನಮಾಡೋ ॥ ಅ.ಪ ॥
ಪುರುಷೋತ್ತಮ ಸುತೀರ್ಥರ ಪ್ರಿಯ ಸುಕುಮಾರ
ದುರಿತೌಘಜೀಮೂತ ಚಂಡಸಮೀರ
ಸುರಚಿರ ತುಳಸಿ ಪಂಕಜಮಣಿಹಾರ
ಧರಿಸಿ ಮೆರೆವೋ ದಿನಕರನವತಾರ
ಕರುಣದಿ ತವ ಶ್ರೀಕರಚರಣಾಂಬುಜ
ದರುಶನವನು ಕೊಡು ಗುಣಗಣನಿಧಿಯೇ ॥ 1 ॥
ಸೇವಕಜನರಿಗೆ ದೇವತರುವೆನಿಪ
ಶ್ರೀವಿಠ್ಠಲನಪಾದತಾವರೆ ಮಧುಪ
ಕೋವಿದಜನರು ಸಂಭಾವಿಸಿ ಸ್ತುತಿಪ
ಪಾವನ್ನಪಾದಾರ್ಚಿತ ಭಾವಜಮುನಿಪ
ಪಾವನ ಸುಮತನ ಜೀವರ ಚಂದ್ರನೆ
ಪಾವನಮತಿ ಕೊಡು ನೀ ಒಲಿದೆನಗೆ ॥ 2 ॥
ಹರಿಭಕ್ತಿವೈರಾಗ್ಯ ಪರ ತತ್ವಜ್ಞಾನ
ವರವ ಪಾಲಿಸು ಸರ್ವವಿದ್ಯಾಪ್ರವೀಣ
ನರಸಿಂಹವಿಠ್ಠಲ ಶ್ರೀಹರಿಸನ್ನಿಧಾನ
ಕರುಣಾಪಾತ್ರನೆ ದಿವ್ಯವರ ಪೂರ್ಣಜ್ಞಾನ
ಹರಿಗುರುಭಜನ ತ್ವತ್ಪದ ವ್ಯಾಸಾರ್ಯರ
ಗುರುವೆಂದೆನಿಸಿದೆ ಧರೆಯೊಳು ಮೆರೆದೆ ॥ 3 ॥

## ಧನ್ಯ ವಿದ್ವಜ್ಜನಶರಣ್ಯ ಶ್ರೀಬ್ರಹ್ಮಣ್ಯಾಭಿದಾ ಗುರುವರೇಣ್ಯ

ರಾಗ : ಖರಹರಪ್ರಿಯ ತಾಳ : ಆದಿ

ಧನ್ಯ ವಿದ್ವಜ್ಜನಶರಣ್ಯ ಶ್ರೀಬ್ರಹ್ಮಣ್ಯಾಭಿದಾ ಗುರುವರೇಣ್ಯ ॥ ಪ ॥

ಕಣ್ವತಟಿನೀಜ್ಞಾನಮಂಟಪ ಸನ್ನಿಧಾತೃಬ್ರಹ್ಮಣ್ಯವಿಠಲಾ
ಭಿನ್ನ ನೃಹರಿ ಕಾರುಣ್ಯಪಾತ್ರಾಪನ್ನಪಾಲನರತ ಮಹಾತ್ಮಾ ॥ ಅ.ಪ ॥

ಪೂಗಾರಾಮಾನ್ವಯ ದೀಪ ಚತುರಾಗಮವಿದ್ವತ್ಪ್ರತಾಪ
ಭಾಗವತಾಧರ್ಮದಾಗರ ಸೌಖ್ಯೋಪ
ಭೋಗ ವಿಷಯದಿ ವೈರಾಗ್ಯಶೀಲನೆ ಮಧ್ವ
ಶ್ರೀ ಗುರು ಸ್ವರ್ಗಾಪವರ್ಗ ಪ್ರದಾಗಮಾರ್ಥ ಪ್ರದೀಪ್ತದರ್ಶನ
ಯೋಗಸಾಗರ ಮದ್ದುರಾದ್ವೈತ ತಾಗಮೋಘತುಷಾರಮಿಹಿರ ॥ 1 ॥

ಜ್ಞಾನ ಸದ್ಭಕ್ತಿಪ್ರದಾನಾ ಶೀಲ ಆನಮಿಸುವೆ ವಿವಸ್ವಾನ
ದಾನವಾಂತಕನಂಘ್ರಿ ಧ್ಯಾನಾನುಸಂಧಾನ
ಮಾನಸಾಂತರದಿ ನಿರ್ಮಾಣ ಮಾಡುತಲೆನ್ನ
ಜ್ಞಾನ ಕರ್ಮೇಂದ್ರಿಯಗಳಿಂದೇನೇನು ನಡೆಯುವುದೆಲ್ಲ ಶ್ರೀಹರಿ
ತಾನೆ ಮಾಡುವನೆಂಬ ಈ ಸುಜ್ಞಾನ ಕರುಣಿಸೊ ಗ್ಲಾನಿ ಹರಿಸೋ ॥ 2 ॥

ಪ್ರತ್ಯರ್ಥಿಪಾಟನಚತುರಾ ಪುರುಷೋತ್ತಮತೀರ್ಥಾರ್ಯ ಕುವರಾ
ಅರ್ಥಿಕಲ್ಪಿತಕಲ್ಪ ಪೃಥ್ವೀಜರಹ ವ್ಯಾಸ
ತೀರ್ಥಗೆ ಮತರಾಜ್ಯವಿತ್ತು ವತ್ಸರ ಸರ್ವ
ಜಿತ್ತಿನೆರಡನೆಯ ಬಹುಳ ದ್ವಾದಶಿ ಉತ್ತರಾಯಣದಲ್ಲಭೀಪುರ
ಕ್ಷೇತ್ರ ತಂದೆವೆಂಕಟೇಶವಿಠ್ಠಲನ ನೇತ್ರಧಾಮ ಸೇರುತ್ತ ಮೆರೆದೇ ॥ 3 ॥

॥ ಶ್ರೀಬ್ರಹ್ಮಣ್ಯತೀರ್ಥಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ
ಶ್ರೀಮಧ್ವೇಶಾರ್ಪಣಮಸ್ತು ॥